ಶ್ರೀ ಎಂ.ಎಸ್. ಕೃಷ್ಣನ್.—ಆ ಮನೆಯ ವಿಷಯ ಪ್ರಸ್ತಾಪ ಮಾಡುವುದು ಅವರಿಗೆ ಬಿಟ್ಟಿದ್ದು. ಆದರೆ ಈ ಮನೆಯಲ್ಲಿ ನಾವೂ ಪ್ರೊಟಿಸ್ಟ್ ಮಾಡಿ ಹೊರಗೆ ಹೋಗುತ್ತೇವೆ ಎಂದು ಹೇಳಿ ಹೋಗಿದ್ದಾರೆ. ಇವರು ವಿಷಯ ಇತ್ಯರ್ಥ ಆಗುವವರೆಗೆ ಹೊರಗಿರುತ್ತೇವೆಂದು ಪಟ್ಟು ಹಿಡಿದಿದ್ದಾರೋ ಅಥವಾ ಟೆಂಪರರಿಯಾಗಿ ಹೊರಗೆ ಹೋಗಿದ್ದಾರೋ ಹೇಗೆ ಎಂದು ತಾವು ಅವರೊಂದಿಗೆ ಮಾತನಾಡಿದರೆ ತಮಗೆ ಗೊತ್ತಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಮನೆಯ ವಿಚಾರವನ್ನು ಎತ್ತಿಕೊಂಡು ಇವರು ಹೋಗಿದ್ದಾರೆ. ಆ ವಿಷಯ ಬಿಟ್ಟು ಇದೊಂದನ್ನೇ ಮಾತನಾಡುವುದಕ್ಕಾಗುವುದಿಲ್ಲ. ಕೃಷ್ಣ ಸಂಧಾನ ಮಾಡುವುದಕ್ಕೆ ಮಾನ್ಯ ಕೃಷ್ಣನ್ ಅವರು ತಯಾರಿದ್ದಾರೆ. ತಾವು ದಯವಾಡಿ ಮಾತುಕತೆ ಮಾಡಿ, ಇಲ್ಲಿ ಕಾರ್ಯಕಲಾಪಗಳು ನಡೆಯಲಿ. ತಾವು ಅವರ ಮನಸ್ಸನ್ನು ತಿಳಿದುಕೊಳ್ಳಿ. ಸರ್ಕಾರ ಮಾತುಕತೆ ಮಾಡುವುದಕ್ಕೆ ತಯಾರು ಇದೆ. ತಾವು ಹೋಗಿ ಕೇಳಿಕೊಂದು ಬನ್ನಿ. ಅವರು ತಯಾರು ಇದ್ದರೆ ಆಲೋಚನೆ ಮಾಡೋಣ ಸ್ಪೀಕರ್ ಅವರನ್ನು ರಿಕ್ವೆಸ್ಟ್ ಮಾಡಿಕೊಳ್ಳೋಣ. ಅಲ್ಲಿಯವರೆಗೆ ಇಲ್ಲಿಯ ಕಾರ್ಯಕಲಾಪಗಳು ನಡೆಯುತ್ತಿರಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಆ ಮನೆಯ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುತ್ತಿಲ್ಲ. ಈ ಮನೆಯಲ್ಲಿ ವಿರೋಧ ಪಕ್ಷದ ಎಲ್ಲಾ ಸದಸ್ಯರನ್ನು ಹೊರಗೆ ಇಟ್ಟು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವುದು ಸರಿಕಾಣುವುದಿಲ್ಲ. ಇಂತಹ ಪ್ರಮುಖ ವಿಷಯ ಚರ್ಚೆಯಾಗುವಾಗ ರಾಜ್ಯದ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆಯಾಗುವ ಸಮಯದಲ್ಲಿ ಅವರನ್ನು ಹೊರಗಡೆ ಇಟ್ಟುಕೊಂಡು ಸಭೆ ನಡೆಸುವುದು ಸರಿಯಲ್ಲ. ಆದ್ದರಿಂದ ಸದನವನ್ನು ಹತ್ತು ನಿಮಿಷ ಮುಂದೂಡಿ ತಾವು ಅವರನ್ನು ಕರೆಯಿಸಿ ಮಾತನಾಡಿ ಒಂದು ಇತ್ಯರ್ಥಕ್ಕೆ ಬನ್ನಿ.

ಅಧ್ಯಕ್ಷರು.—ಈ ವಿಷಯದ ಬಗ್ಗೆ ಸದನವನ್ನು ಮುಂದೂಡುವುದು ಸರಿಯಲ್ಲ. ಉಪಾಧ್ಯಕ್ಷರು ಸಭೆಯನ್ನು ಮುಂದುವರೆಸಿಕೊಂಡು ಹೋಗುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇರುವ ನಾವು ಮೂರು ಜನರೂ ಹೊರಗೆ ಹೋದರೆ ಇದು ಬರೀ ಜನತಾ ಪಾರ್ಟಿ ಮೀಟಿಂಗ್ ಆಗುತ್ತದೆ. ಸರ್ಕಾರ ಇದರ ಬಗ್ಗೆ ಯೋಚನೆ ಮಾಡಿ ಸಮ್ಮ ಮಾತಿನ ಕಡೆ ಗಮನ ಹರಿಸುವುದಿಲ್ಲವೆಂದರೆ ಇಂತಹ ಒಂದು ಸಂದರ್ಭದಲ್ಲಿ ನಾವೂ ಇಲ್ಲಿ ಕೂಡಲು ಸಿದ್ಧರಿಲ್ಲ. ನಾವೂ ಕೂಡಾ ಹೊರಗೆ ಹೋಗಬೇಕಾಗುತ್ತದೆ.

ಶ್ರೀ ಎಸ್, ಆರ್, ಬೊಮ್ಮಾಯಿ.—ಮಾನ್ಯ ಯಡಿಯೂರಪ್ಪನವರಾಗಲೀ, ಅಥವಾ ಕೃಷ್ಣನ್ ಅವರಾಗಲೀ ಹೋಗಿ ಅವರ ಜೊತೆ ಮಾತುಕತೆ ಮಾಡಿ ಬರಲಿ. ಅವರು ಮಾತುಕತೆಗೆ ಸಿದ್ಧರಿದ್ದಾರೆಯೇ ಎಂದು ತಿಳಿಯಲಿ.

ಶ್ರೀ ಎಂ. ಎಸ್. ಕೃಷ್ಣನ್.—ನಾವೂ ಬರುತ್ತೇವೆ. ಅವರೂ ಚರ್ಚೆಗೆ ಬರಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಹೋಗಿ ಕೇಳಿಕೊಂಡು ಬನ್ನಿ.

ಅಧ್ಯಕ್ಷರು.—ಈಗ ಮಾನ್ಯ ವೇದಾಂತ ಹೆಮ್ಮಿಗೆಯವರ ಗಮನ ಸೆಳೆಯುವ ಸೂಚನೆ.

೧೨-೩೦ ಪಿ.ಎಂ.

ಗಮನ ಸೆಳೆಯುವ ಸೂಚನೆ

ಮೈಸೂರು ವಿಶ್ವವಿದ್ಯಾನಿಲಯ ಅಧ್ಯಾಪಕರುಗಳಿಗೆ ಯು.ಜಿ.ಸಿ. ವೇತನ ಶ್ರೇಣಿಯನ್ನು ಅನ್ವಯಿಸದೇ ಇರುವುದು.

ಶ್ರೀ ವೇದಾಂತ ಹೆಮ್ಮಿಗೆ.—ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಯು.ಜಿ.ಸಿ. ವೇತನ ಶ್ರೇಣಿಯನ್ನು ಇದುವರೆಗೂ ಅನ್ವಯಿಸದಿರುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಪ್ರೊಫೆಸರ್ ಆರ್. ಸಿ. ಮೆಹ್ರೋತ್ರ ಅವರ ಶಿಫಾರಸುಗಳ ಆಧಾರದ ಮೇಲೆ ಭಾರತ ಸರ್ಕಾರವು ೧೯೮೬ ಜನವರಿ ಒಂದರಿಂದ ಜಾರಿಗೆ ಬರುವಂತೆ ವಿಶ್ವವಿದ್ಯಾನಿಲಯದ ಶಿಕ್ಷಕರ ವೇತನ ಶ್ರೇಣಿಗಳನ್ನು ಪರಿಷ್ಕೃತಗೊಳಿಸಿದೆ. ಈ ಪರಿಷ್ಕೃತ ವೇತನ ಶ್ರೇಣಿಗಳನ್ನು ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದ ೫ ವಿಶ್ವವಿದ್ಯಾನಿಲಯಗಳ ಶಿಕ್ಷಕರಿಗೆ ದಿನಾಂಕ ೧-೧-೧೯೮೬ ರಿಂದ ಜಾರಿಗೆ ಬರುವಂತೆ ಆದೇಶ ಸಂಖ್ಯೆ ಇಡಿ ೬೦ ಯುಎನ್‌ಐ ೮೭ ದಿನಾಂಕ ೫-೧೨-೧೯೮೭ರಂದು ಹೊರಡಿಸಿದೆ. ಇದು ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರಿಗೂ ಅನ್ವಯಿಸಿ ಸದರಿ ಆದೇಶದ ಮೇರೆಗೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸಂಬಳ ಕೊಡಲಾಗುವುದು.

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಒದಗಿಸಲಿರುವ ಶೇಕಡ ೮೦ರಷ್ಟು ಹೆಚ್ಚುವರಿ ವೆಚ್ಚದಲ್ಲಿ ೧೯೮೬ ಮತ್ತು ೧೯೮೭ ವರ್ಷಗಳಿಗೆ ಬಿಡುಗಡೆ ಮಾಡಬೇಕೆಂದು ಯುಜಿಸಿ ಕಾರ್ಯದರ್ಶಿಯವರಿಗೆ ರಾಜ್ಯ ಸರ್ಕಾರದಿಂದ ಪತ್ರ ಬರೆಯಲಾಗಿದೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೆ ಬಹಳ ದಿವಸಗಳಿಂದ ಮೈಸೂರು ವಿಶ್ವವಿದ್ಯಾನಿಲಯದ ಸುಮಾರು ೮೦ ಜನ ಪ್ರೊಫೆಸರ್‌ಗಳು ೭೦೦ ಜನ ರೀಡರ್ಸ್‌ಗಳು ಹಾಗೂ ೧೨೦೦ ಜನ ಲೆಕ್ಚರರ್ಸ್‌ಗಳ ಬೇಡಿಕೆ ಇನಿತ್ತು ಅದನ್ನು ಶಿಕ್ಷಣ ಸಚಿವರು ಈಗ ಈಡೇರಿಸಿಕೊಟ್ಟಿದ್ದಾರೆ, ಆದಕ್ಕಾಗಿ ನಾನು ಅಧ್ಯಾಪಕರ ಪರವಾಗಿ ಅವರಿಗೆ ವಂದನೆಗಳನ್ನರ್ಪಿಸುತ್ತೇನೆ,

ಅಧ್ಯಕ್ಷರು.—ಮಾನ್ಯ ಶರಣಬಸಪ್ಪ ಮಾಲೀ ಪಾಟೀಲ್, ಸದಸ್ಯರು ಗೈರುಹಾಜರಾಗಿದ್ದಾರೆ,

೨) ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ಹರಿಜನರ ಮೇಲೆ ನಡೆದ ದೌರ್ಜನ್ಯದ ಬಗ್ಗೆ

ಶ್ರೀ ಎಂ ಎಸ್. ಕೃಷ್ಣನ್.—ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ಹರಿಜನರ ಮೇಲೆ ನಡೆಸಿರುವ ದೌರ್ಜನ್ಯದ ಬಗ್ಗೆ ಮಾನ್ಯ ಗೃಹಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಸಚಿವರು).—ತುರವನೂರು ಚಿತ್ರದುರ್ಗಕ್ಕೆ ಸುಮಾರು ೨೩ ಕಿ.ಮೀ ದೂರವಿದೆ. ಎಲ್ಲಾ ಜನಾಂಗಕ್ಕೆ ಸೇರಿದ ಸುಮಾರು ೧೫,೦೦೦ ಜನ ಸಂಖ್ಯೆ ಇದೆ. ಸದರಿ ಊರಿನಲ್ಲಿ ಒಂದು ಮಾರಮ್ಮನ ದೇವಸ್ಥಾನ ಇದ್ದು ಕಳೆದ ೭೦ ವರ್ಷಗಳಿಂದ ಜಾತ್ರೆ ಆಗಿರಲಿಲ್ಲ. ಈ ವರ್ಷ ಊರಿನ ಎಲ್ಲಾ ಜನಾಂಗದವರು ಸದರಿ ಜಾತ್ರೆಯನ್ನು ಇದೇ ಜನವರಿ ೧೯ ರಿಂದ ೨೨ರವರೆಗೆ ನಡೆಸಲು ತೀರ್ಮಾನಿಸಿರುತ್ತಾರೆ. ಈ ಸಂದರ್ಭದಲ್ಲಿ ಅಲ್ಲಿನ ಪರಿಶಿಷ್ಟ ವರ್ಗದವರು ರಕ್ತಮಿಶ್ರಿತ ಅನ್ನವನ್ನು ಊರಿನ ಸರಹದ್ದುಗಳ ಮೇಲೆ ಚೆಲ್ಲುವುದು ಒಂದು ಸಂಪ್ರದಾಯವಾಗಿದೆ, ಆದರೆ ಅವರು ಈ ರಕ್ತಮಿಶ್ರಿತ ಅನ್ನವನ್ನು ಹಳೆಯ ಸರಹದ್ದುಗಳ ಮೇಲೆ ಚೆಲ್ಲಿ ಹೊಸ ಬಡಾವಣೆಗನನ್ನು ಬಿಟ್ಟಿರುತ್ತಾರೆ, ಇದರಿಂದ ಉಳಿದ ಕೋಮುಗಳ ಜನಗಳು ಕಂಪಿತರಾಗಿದ್ದು ಸ್ಥಳೀಯ ಪೊಲೀಸರ ಮಧ್ಯಸ್ತಿಕೆಯಿಂದ ಪರಿಸ್ಥಿತಿ ಹತೋಟಿಯಲ್ಲಿ ಇತ್ತು.

ಪರಿಶಿಷ್ಟ ವರ್ಗದವರು ಮಾಡಿದ ಸಂಪ್ರದಾಯದ ಕೆಲಸಕ್ಕಾಗಿ ಊರಿನವರು ಸುಮಾರು ೬೦ ಕಂರಿಗಳನ್ನು ಮತ್ತು ಹಣವನ್ನು ಕೊಡುವುದಿತ್ತು. ಸವರ್ಣೀಯರವರು ಪರಿಶಿಷ್ಟ ಜಾತಿಯವರ ಮನವಿಯನ್ನು ನಿರಾಕರಿಸಿರುತ್ತಾರೆ. ಇದರಿಂದಾಗಿ ಇವರಿಬ್ಬರ ನಡವೆ ವೈಮನಸ್ಯ ಉಂಟಾಗಿದೆ.

ದಿನಾಂಕ ೨೨-೧-೧೯೮೮ರಂದು ತುರುವನೂರು ಬಸ್‌ಸ್ಟಾಂಡಿನ ಬಳಿ ಪರಿಶಿಷ್ಟ ಜಾತಿಗೆ ಸೇರಿದ ತಿಪ್ಪಯ್ಯನನ್ನು ಅದೇ ಊರಿನ ರೆಡ್ಡಿ ಜನಾಂಗದ ಗೋವಿಂದಪ್ಪನು, ರಕ್ತಮಿಶ್ರಿತ ಅನ್ನವನ್ನು ಹೊಸ ಬಡಾವಣೆಯಲ್ಲಿ ಚೆಲ್ಲಿದಿದ್ದ ಕಾರಣ ಹೊಡೆದಿರಂತ್ತಾರೆ. ಗಾಯಗೊಂಡ ತಿಪ್ಪಯ್ಯನನ್ನು, ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಸೇರಿಸಿ, ಅವರ ಹೇಳಿಕೆ ಮೇರೆಗೆ ಗೋವಿಂದಪ್ಪನ ಮೇಲೆ ಒಂದು ಮೊಕದ್ದಮೆ ದಾಖಲಿಸಿ ಮಾಡಿಕೊಳ್ಳಲಾಯಿತು. ವಿಷಯ ತಿಳಿದ ಸುಮಾರು ೨೫-೩೦ ಪರಿಶಿಷ್ಟ ವರ್ಗದ ಗುಂಪು ಸಂಜೆ ೬-೩೦ ಗಂಟೆಗೆ ಊರಿನೊಳಗೆ ಬಂದು ಗೋವಿಂದಪ್ಪನು, ತಿಪ್ಪಯ್ಯನಿಗೆ ಹೊಡೆದ ಬಗ್ಗೆ ಪ್ರಶ್ನಿಸಿರುತ್ತಾರೆ.